DECCAN HERALD

Online Newspaper Clipping Service

Dtd-Saturday, 11th, November- 2017

Pg.No.01

Deemed-to-be varsities not allowed to use university tag

Prakash Kumar

NEW DELHI, DHNS: The UGC has directed a total of 14 deemed-to-be universities including Ja+gadguru Sri Shivarathreeswara University and Manipal Academy of Higher Education not to use the word "University," threatening with action in case of non-compliance of its directive.

The Indian institute of Science, Bangalore, Manipal Academy of Higher Education, KLE Academy of Higher Education and Research, BLDE University, Vijaypur, and Swami Vivekananda Yoga Anusandhana Samsthana are among the list of deemed-to-be-universities in Karnataka whom the commission has issued its directive in this regard.

The UGC has also issued similar directive to 109 deemed-to-be-universities. This comes following a recent Supreme Court verdict. The apex court, while hearing a petition on deemed-to-be-universities offering correspondence course in engineering, directed the government to restrain deemed-to-be-universities from using the word 'University' within one month from the date of judgement.

» Varsities, Page 8

Deemed-to-be varsities...

Varsities, from Page 1

"The institutions are hereby directed to restrain from using the word 'University' with its name failing which necessary action would be initiated in accordance with the UGC (institutions deemed-to-be-universities) Regulations, 2016. Instead, the Institution may mention the word "Deemed to be University" within parenthesis," the UGC said in its directive.

For the deemed-to-be-universities which were notified by the central government with the word "University" with their names, the higher education regulator said they can send it a proposal for an alternative name without using the word 'University.'

"Such deemed-to-be-universities can also apply for an alternative name with the HRD Ministry," UGC Secretary P K Thakur said.

The Tata Institute of Social Sciences, Bombay; Symbiosis International University, Pune: Homi Bhabha National Institute, Bombay; Indian Institute of Space Science and Technology, Thiruvananthapuram; and Vellore Institute of Technology, Tamil Nadu are among the deemed-to-be universities which have to comply with the UGC directive.

SC refuses Constitution bench on medical scam

Ashish Tripathi

NEW DELHI, DHNS: The Supreme Court on Friday annulled an order to set up a Constitution bench to decide on monitoring the CBI probe in the medical colleges scam, allegedly involving members of the highest judiciary.

In a special sitting, a five-judge Constitution bench presided over by Chief Justice Dipak Misra declared as "ineffective and not binding" an order passed by a two-judge bench of Justices J Chelameswar and S Abdul Nazeer on Thursday.

"CJI is the master of roster, though on judicial side, he is first among equals. No judge can hear a matter unless assigned by the CJI, neither two-judge or three-judge can allocate any matter to themselves, otherwise it would lead to anarchy and chaos in administration of justice," the bench, also comprising Justices R K Agrawal, Arun Mishra, Amitava Roy and A M Khanwilkar, said. The court passed its after setting up a five-judge bench in a PIL filed by NGO 'Campaign for Judicial Accountability and Reforms', even as advocate Prashant Bhushan made loud protest alleging the CJI should not hear it as the charges squarely covered him.

"It is factually-incorrect. No FIR can be registered against any judge of the country as judges are protected under the Constitution. It cannot be even against a judge of a district court or a high court, much less of a Supreme Court, without sanction," the bench said.

"What kind of FIR is against me? What nonsense? Please read the FIR," the CJI told Bhushan, who contended, "You would bring gross disrepute to the institution by taking up this case".

The CJI asked Additional Solicitor General P S Narasimha to read out orders passed by the court in September, relating to a particular medical college. The case has led to arrest of a former Orissa HC judge I M Quddusi and others by the CBI. The CJI said he had already instituted an in-house inquiry against the Allahabad HC judge. "How can we know what anybody talks about us... Can judiciary be left to the disposal of a Sub Inspector or an SHO," the bench asked Bhushan as he dared the court to issue contempt against him.

The bench then said, "You are not worth contempt."

The bench also asked if a particular advocate can demand a specific bench should hear the matter. Senior advocate Dushyant Dave has on Thursday impressed upon a bench led by Justice Chelameswar to hear a petition filed by advocate Kamini Jaiswal. The court had then sent the matter to the Constitution bench after noting allegations are "disturbing" and pertained to functioning of the apex court. The court also asked why it was insisted upon to hear Jaiswal's petition when a similar plea by an NGO was filed and put up for hearing before a bench of Justices A K Sikri and Ashok Bhushan for Friday. "It is not shocking that an advocate would say who should hear who not. Is it not denigrating us or undermining the edifice of the institution," the bench asked.

ಉದಯವಾಣಿ

ಸರ್ಕಾರಿ ನೌಕರರಿಗೆ 23 ಸಾರ್ವತ್ರಿಕ, 17 ಪರಿಮಿತ ರಜೆ

ಬೆಂಗಳೂರು: ರಾಜ್ಯ ಸರ್ಕಾರ 2018ನೇ ಸಾಲಿನ ಸಾರ್ವಜನಿಕ ಹಾಗೂ ಪರಿಮಿತ ರಜೆಗಳನ್ನು ಘೋಷಣೆ ಮಾಡಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಸರ್ಕಾರಿ ರಜೆ ಇರುವ ದಿನವೇ ಮಾರ್ಚ್ 18 ರಂದು ಯುಗಾದಿ ಹಬ್ಬ (ಭಾನುವಾರ), ಏಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿ (ಎರಡನೇ ಶನಿವಾರ) ಬಂದಿರುವುದರಿಂದ ಈ ಎರಡು ದಿನಗಳನ್ನು ರಜೆ ಪಟ್ಟಿಗೆ ಸೇರಿಸಲಾಗಿಲ್ಲ.

ಸಾರ್ವಜನಿಕ ರಜೆಗಳು	
ಜನವರಿ 15	ಸಂಕ್ರಾಂತಿ
ಜನವರಿ 26	ಗಣರಾಜ್ಯೋತ್ಸವ
ಫೆಬ್ರವರಿ 13	ಮಹಾ ಶಿವರಾತ್ರಿ
ಮಾರ್ಚ್ 29	ಮಹಾವೀರ ಜಯಂತಿ
ಮಾರ್ಚ್ 30	ಗುಡ್ ಫ್ರೈಡೆ.
ಏಪ್ರಿಲ್ 18	ಬಸವ ಜಯಂತಿ
ಮೇ 1	ಕಾರ್ಮಿಕರ ದಿನಾಚರಣೆ
ಜೂನ್ 16	ರಮ್ಜಾನ್
ಆಗಸ್ಟ್ 15	ಸ್ವಾತಂತ್ರ್ಯ ದಿನಾಚರಣೆ.
ಸೆಪ್ಟೆಂಬರ್ 13	ಗಣೇಶ ಚತುರ್ಥಿ
ಸೆಪ್ಟೆಂಬರ್ 21	ಮೊಹರಂ ಕೊನೇ ದಿನ.
ಅಕ್ಟೋಬರ್ 2	ಗಾಂಧಿ ಜಯಂತಿ
ಅಕ್ಟೋಬರ್ 8	ಮಹಾಲಯ ಅಮವಾಸ್ಯೆ
ಅಕ್ಟೋಬರ್ 18	ಮಹಾನವಮಿ, ಆಯುಧ ಪೂಜೆ.
ಅಕ್ಟೋಬರ್ 19	ವಿಜಯ ದಶಮಿ
ಅಕ್ಟೋಬರ್ 24	ವಾಲ್ಮೀಕಿ ಜಯಂತಿ
ನವೆಂಬರ್ 1	ಕನ್ನಡ ರಾಜ್ಯೋತ್ಸವ
ನವೆಂಬರ್ 6	ನರಕ ಚತುರ್ದಶಿ
ನವೆಂಬರ್ 8	ಬಲಿಪಾಡ್ಯಮಿ
ನವೆಂಬರ್ 21	ಈದ್ ಮಿಲಾದ್
ನವೆಂಬರ್ 26	ಕನಕದಾಸ ಜಯಂತಿ.
ಡಿಸೆಂಬರ್ 25	ಕ್ರಿಸ್‌ಮಸ್

2018ರ ಪರಿಮಿತ ರಜಾ ದಿನಗಳು	
ಜನವರಿ 1	ನೂತನ ವರ್ಷಾಚರಣೆ
ಮಾರ್ಚ್ 1	ಹೋಳಿ ಹಬ್ಬ
ಮಾರ್ಚ್ 22	ದೇವರ ದಾಸಿಮಯ್ಯ ಜಯಂತಿ
ಮಾರ್ಚ್ 31	ಶುಭ ಶನಿವಾರ
ಏಪ್ರಿಲ್ 20	ಶಂಕರಾಚಾರ್ಯ ಜಯಂತಿ
ಏಪ್ರಿಲ್ 21	ರಾಮಾನುಜಾಚಾರ್ಯ ಜಯಂತಿ
ಮೇ 2	ಷಬ್ ಎ ಬರಾತ್
ಜೂನ್ 12	ಷಬ್ ಎ ಖೈದರ್
ಜೂನ್ 15	ಜುಮ್ಮತ್ ಉಲ್ ವಿದಾ
ಆಗಸ್ಟ್ 24	ವರಮಹಾಲಕ್ಷ್ಮೀ ವ್ರತ, ತಿರು ಓಣಂ
ಆಗಸ್ಟ್ 25	ಋಗ್ ಉಪಾಕರ್ಮ
ಆಗಸ್ಟ್ 27	ಬ್ರಹ್ಮಶ್ರೀ ನಾರಾಯಣಗುರು ಜಯಂತಿ.
ಸೆಪ್ಟಂಬರ್ 12	ಸ್ವರ್ಣಗೌರಿ ಜಯಂತಿ
ಸೆಪ್ಟಂಬರ್ 17	ವಿಶ್ವಕರ್ಮ ಜಯಂತಿ
ನವೆಂಬರ್ 23	ಗುರುನಾನಕ್ ಜಯಂತಿ
ನವೆಂಬರ್ 24	ಹುತ್ತರಿ ಹಬ್ಬ.
ಡಿಸೆಂಬರ್ 24	24 ಕ್ರಿಸ್‌ಮಸ್ ಇವ್.

ಏನು– ಎತ್ತ?

ಖಾಸಗಿ ವೈದ್ಯ ಸಂಸ್ಥೆಗಳ ಕಾಯ್ದೆ (ತಿದ್ದುಪಡಿ) ಮಸೂದೆ ಬಗ್ಗೆ...

ಸರ್ಕಾರ– ಖಾಸಗಿ ವೈದ್ಯರ ಜಟಾಪಟಿ

ಅಂಕಿ-ಅಂಶಗಳು

70% ಹೊರರೋಗಿಗಳಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಬರುವವರು	**40** ಸಾವಿರ ರಾಜ್ಯದಲ್ಲಿರುವ ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳು	**70** ಸಾವಿರಕ್ಕೂ ಹೆಚ್ಚು ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿರುವ ವೈದ್ಯರು	**1.25** ಲಕ್ಷ ನೋಂದಾಯಿತ ವೈದ್ಯರು	**15** ಲಕ್ಷ ಪ್ರತ್ಯಕ್ಷ– ಪರೋಕ್ಷವಾಗಿ ಖಾಸಗಿ ಆಸ್ಪತ್ರೆ ಅವಲಂಬಿಸಿ ಕೆಲಸ ಮಾಡುವವರು

ರಾಜೇಶ್ ರೈ ಚಟ್ಲ

ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳು ರೋಗಿಗಳನ್ನು ಸುಲಿಗೆ ಮಾಡುತ್ತಿವೆ ಎಂದು ಹೇಳಿ ಅದಕ್ಕೆ ಕಡಿವಾಣ ಹಾಕುವ ಸಲುವಾಗಿ ಸಿದ್ಧಪಡಿಸಿರುವ 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ (ತಿದ್ದುಪಡಿ) ಮಸೂದೆ- 2017' (ಕೆಪಿಎಂಇ) ಅನ್ನು ಬೆಳಗಾವಿಯಲ್ಲಿ ನ. 13ರಿಂದ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಮತ್ತೊಮ್ಮೆ ಮಂಡಿಸಲು ರಾಜ್ಯ ಸಚಿವ ಸಂಪುಟ ಸಭೆ ತಾತ್ವಿಕ ಒಪ್ಪಿಗೆ ನೀಡಿದೆ. ಅಲ್ಲದೆ, ಪರಿಷ್ಕರಣೆ ಅಗತ್ಯವಿದ್ದರೆ ಅದರ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೊಟ್ಟಿದೆ.

ಈ ಮಸೂದೆಯ ಕೆಲವು ಅಂಶಗಳಿಗೆ ಖಾಸಗಿ ವೈದ್ಯರಿಂದ ತೀವ್ರ ವಿರೋಧ ವ್ಯಕ್ತವಾದ ಕಾರಣ ಇದನ್ನು ವಿಧಾನಮಂಡಲದ ಜಂಟಿ ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿತ್ತು. ಸಮಿತಿ ಹಲವು ಶಿಫಾರಸುಗಳನ್ನು ನೀಡಿದೆ. ಇದಕ್ಕೂ ಭಾರತೀಯ ವೈದ್ಯಕೀಯ ಸಂಘ (ಐಎಂಎ) ವಿರೋಧ ವ್ಯಕ್ತಪಡಿಸಿದೆ. ನ. 3ರಂದು ಹೊರರೋಗಿಗಳ ಚಿಕಿತ್ಸಾ ಸೇವೆ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದೆ. ಮಸೂದೆ ಮಂಡನೆಯಿಂದ ಸರ್ಕಾರ ಹಿಂದೆ ಸರಿಯದಿದ್ದರೆ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ.

ತಿದ್ದುಪಡಿಗೆ ಪ್ರೇರಣೆ?

ಖಾಸಗಿ ಆಸ್ಪತ್ರೆಗಳ ನಿಯಂತ್ರಣಕ್ಕೆ ನಿಯಮಗಳನ್ನು ರೂಪಿಸಲು ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ವಿಕ್ರಮ್‌ಜಿತ್ ಸೇನ್ ನೇತೃತ್ವದ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿತ್ತು. ಈ ಸಮಿತಿ ನೀಡಿರುವ ವರದಿ ಆಧರಿಸಿ ತಿದ್ದುಪಡಿ ಮಸೂದೆ ರೂಪಿಸಲಾಗಿದೆ. 'ರೋಗಿಯ ಆರ್ಥಿಕ ಸಾಮರ್ಥ್ಯ ತಿಳಿದುಕೊಂಡು ವಿನಾಕಾರಣ ತಪಾಸಣೆಗೆ ಒಳಪಡಿಸುವುದು, ಚಿಕಿತ್ಸೆ ನೀಡುವುದು, ಕೊನೆಗೆ ಜಮಾನಿಯಂತ್ರಿತ ವಾತಾವರಣದಲ್ಲಿ ಮನೆಗೆ ಕಳುಹಿಸಿಕೊಡುವ ಪ್ರವೃತ್ತಿ ಖಾಸಗಿ ಆಸ್ಪತ್ರೆಗಳಲ್ಲಿ ಕಂಡುಬರುತ್ತಿದೆ. ಜೀವ ಹೋದರಂತೂ ಹಣ ಕೊಡದೆ ಹೆಣ ನೀಡುವುದಿಲ್ಲ. ಖಾಸಗಿ ಆಸ್ಪತ್ರೆಗಳ ಈ ಪ್ರವೃತ್ತಿಗೆ ಕಡಿವಾಣ ಹಾಕಲು ಕಠಿಣ ಕಾನೂನಿನ ಅಗತ್ಯವಿದೆ' ಎಂದು ಆರೋಗ್ಯ ಸಚಿವ ಕೆ.ಆರ್. ರಮೇಶ್ ಕುಮಾರ್ ಸಮರ್ಥಿಸಿಕೊಂಡಿದ್ದರು.

ಮಸೂದೆಯಲ್ಲಿರುವ ಪ್ರಮುಖ ಅಂಶಗಳೇನು?

- ರಾಜ್ಯ ಸರ್ಕಾರ ನಿಗದಿಪಡಿಸುವುದಕ್ಕಿಂತ ಹೆಚ್ಚಿನ ಶುಲ್ಕವನ್ನು ಖಾಸಗಿ ಆಸ್ಪತ್ರೆಯವರು ವಸೂಲು ಮಾಡಿದರೆ ₹ 25 ಸಾವಿರದಿಂದ ₹ 5 ಲಕ್ಷದವರೆಗೆ ದಂಡ ಮತ್ತು ಆರು ತಿಂಗಳಿಂದ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ.
- ತುರ್ತು ಚಿಕಿತ್ಸೆ ಸಂದರ್ಭದಲ್ಲಿ ರೋಗಿಯಿಂದ ಅಥವಾ ಅವರ ಪ್ರತಿನಿಧಿಯಿಂದ ಮುಂಗಡ ಪಾವತಿಸುವಂತೆ ಒತ್ತಾಯಿಸುವಂತಿಲ್ಲ.
- ಆಸ್ಪತ್ರೆಯಲ್ಲಿ ಯಾವುದೇ ವ್ಯಕ್ತಿ ಮೃತಪಟ್ಟರೆ ಸಂಬಂಧಿಕರಿಗೆ ದೇಹ ಹಸ್ತಾಂತರಿಸುವ ಮೊದಲು ಬಾಕಿ ಮೊತ್ತ ಪಾವತಿಸುವಂತೆ ಒತ್ತಾಯಿಸುವಂತಿಲ್ಲ. ಬಾಕಿ ಮೊತ್ತವನ್ನು ನಂತರ ಸಂಗ್ರಹಿಸಬಹುದು.
- ಖಾಸಗಿ ವೈದ್ಯಕೀಯ ಸಂಸ್ಥೆಗಳು ಸಂಬಂಧಿಸಿದ ಪ್ರಾಧಿಕಾರದಲ್ಲಿ ನೋಂದಣಿ ಮಾಡುವುದು ಕಡ್ಡಾಯ. ನೋಂದಣಿ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸುವಂತಿಲ್ಲ.
- ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರತಿಯೊಂದು ಚಿಕಿತ್ಸೆಗೂ ಶುಲ್ಕ ನಿಗದಿಪಡಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇರುತ್ತದೆ. ತಜ್ಞರ ಸಮಿತಿಯ ಶಿಫಾರಸು ಮೇರೆಗೆ ಬೇರೆ ಬೇರೆ ವರ್ಗದ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಬೇರೆ ಬೇರೆ ಪ್ರಮಾಣದಲ್ಲಿ ಶುಲ್ಕ ನಿಗದಿ ಆಗಲಿದೆ.
- ಪ್ರತಿಯೊಂದು ಆಸ್ಪತ್ರೆಯಲ್ಲೂ ಚಿಕಿತ್ಸಾ ಶುಲ್ಕದ ಪಟ್ಟಿ ಪ್ರದರ್ಶಿಸಬೇಕು.
- ರೋಗಿಗಳ ಕುಂದುಕೊರತೆ ವಿಚಾರಣೆಗೆ ಜಿಲ್ಲಾ ಅಥವಾ ಮಹಾನಗರ ಮಟ್ಟದಲ್ಲಿ ಕುಂದುಕೊರತೆ ಪರಿಹಾರ ಸಮಿತಿ ರಚನೆ. ಈ ಸಮಿತಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪೊಲೀಸ್ ವರಿಷ್ಠ, ಜಿಲ್ಲಾ ಖಾಸಗಿ ವೈದ್ಯಕೀಯ ಸಂಸ್ಥೆಗಳ ಒಬ್ಬ ಪ್ರತಿನಿಧಿ, ಜಿಲ್ಲಾ ಸರ್ಜನ್, ಸರ್ಕಾರಿ ವಕೀಲ ಮತ್ತು ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಿದ ಮಹಿಳಾ ಪ್ರತಿನಿಧಿ ಇರುತ್ತಾರೆ.

ಯಾರಿಗೆಲ್ಲ ಅನ್ವಯ?

ಖಾಸಗಿ ಆಸ್ಪತ್ರೆ, ಪ್ರಸೂತಿ ಗೃಹ, ನರ್ಸಿಂಗ್ ಹೋಂ, ಡೆಂಟಲ್ ಕ್ಲಿನಿಕ್, ಡೆಂಟಲ್ ಪಾಲಿ ಕ್ಲಿನಿಕ್, ಚಿಕಿತ್ಸಾ ಪ್ರಯೋಗಾಲಯ, ಡಯಾಗ್ನೊಸ್ಟಿಕ್ ಕೇಂದ್ರ, ಹೆರಿಗೆ ಆಸ್ಪತ್ರೆ, ರಕ್ತನಿಧಿ, ಎಕ್ಸ್‌ರೇ ಕೇಂದ್ರ, ಸ್ಕ್ಯಾನಿಂಗ್ ಕೇಂದ್ರ, ಫಿಸಿಯೋಥೆರಪಿ, ಪಾಲಿ ಕ್ಲಿನಿಕ್, ವೈದ್ಯ ಸಲಹಾ ಕೇಂದ್ರ, ಸಾರ್ವಜನಿಕ ರೋಗ ತಪಾಸಣೆ, ರೋಗ ತಡೆಗಟ್ಟುವಿಕೆ ಅಥವಾ ರೋಗಗುಣಪಡಿಸುವ ಹೆಸರುಗಳಿಂದ ಕರೆಯುವ ಸಂಸ್ಥೆಗಳು, ಸ್ವಯಂಸೇವಾ ಅಥವಾ ಖಾಸಗಿ ಸಂಸ್ಥೆಗಳು.

ಐಎಂಎ ಬೇಡಿಕೆ ಏನು?

ಕಾಯ್ದೆ ತಿದ್ದುಪಡಿ ಸಂಬಂಧ ನ್ಯಾಯಮೂರ್ತಿ ವಿಕ್ರಮ್‌ಜಿತ್ ಸೇನ್ ಸಮಿತಿ ನೀಡಿದ ವರದಿಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಬೇಕು. ಈಗ ಮಸೂದೆಯಲ್ಲಿ ಸೇರಿಸಿರುವ ಹಲವು ಅಂಶಗಳ ಬಗ್ಗೆ ಸಮಿತಿ ಮುಂದೆ ಮೊದಲೇ ಐಎಂಎ ಆಕ್ಷೇಪ ವ್ಯಕ್ತಪಡಿಸಿತ್ತು. ಹಾಗಾಗಿ ಸಮಿತಿಯವರು ಆ ಅಂಶಗಳನ್ನು ಕೈಬಿಟ್ಟಿದ್ದರು. ಆದರೆ, ಸಮಿತಿಯ ವರದಿ ಕಡೆಗಣಿಸಿ, ತಮಗೆ ಬೇಕಾದ ಅಂಶಗಳನ್ನು ಜಾರಿಗೆ ತರಲು ಆರೋಗ್ಯ ಸಚಿವರು ತೀರ್ಮಾನಿಸಿದ್ದಾರೆ. ಇದು ಪೂರ್ವಗ್ರಹಪೀಡಿತ. ಆಸ್ಪತ್ರೆಗಳ ಮೇಲೆ, ವೈದ್ಯರ ಮೇಲೆ, ವೈದ್ಯಕೀಯ ಸಿಬ್ಬಂದಿ ಮೇಲೆ ಮತ್ತು ಬಹುಮುಖ್ಯವಾಗಿ ಸಾರ್ವಜನಿಕರ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎನ್ನುವುದು ಖಾಸಗಿ ವೈದ್ಯರ ಆಕ್ಷೇಪ. 'ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಬೇಕೆಂದಾದರೆ 2010ರಲ್ಲಿ ಯುಪಿಎ ಸರ್ಕಾರ ಜಾರಿಗೆ ತಂದಿರುವ ಕೇಂದ್ರದ ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್ ಜಾರಿಗೆ ತನ್ನಿ. ಕೇರಳ ಸರ್ಕಾರ ಅದನ್ನು ಈಗಾಗಲೇ ಜಾರಿಗೆ ತಂದಿದೆ. ಇದರ ಪ್ರಕಾರ ಸರ್ಕಾರಿ ಆಸ್ಪತ್ರೆಗಳೂ ಕಾಯ್ದೆಯ ವ್ಯಾಪ್ತಿಗೆ ಬರುತ್ತವೆ' ಎನ್ನುವುದು ಅವರ ವಾದ.

ಯಾವೆಲ್ಲ ತಿದ್ದುಪಡಿಗಳಿಗೆ ಐಎಂಎ ವಿರೋಧ, ಸಮರ್ಥನೆಗಳೇನು?

ರೋಗಿಗಳಿಗೆ ನ್ಯಾಯ ಒದಗಿಸಲು ಗ್ರಾಹಕರ ವೇದಿಕೆ ಮತ್ತು ಮೆಡಿಕಲ್ ಕೌನ್ಸಿಲ್ ಎಂಬ ಎರಡು ಸಂಸ್ಥೆಗಳಿವೆ. ತಪ್ಪಿತಸ್ಥರೆಂದು ತೀರ್ಮಾನವಾದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲೂ ಅವಕಾಶಗಳಿವೆ. ಹೀಗಾಗಿ, ಜಿಲ್ಲಾ ಮಟ್ಟದಲ್ಲಿ ಮತ್ತೊಂದು ಕುಂದುಕೊರತೆ ಪರಿಹಾರ ಸಮಿತಿ ರಚನೆ ಅಗತ್ಯ ಇಲ್ಲ. ರಾಜ್ಯದಲ್ಲಿ ಶೇ 95ಕ್ಕಿಂತಲೂ ಹೆಚ್ಚು ಸಣ್ಣ ಮತ್ತು ಮಧ್ಯಮ ಗಾತ್ರದ ಆಸ್ಪತ್ರೆಗಳಿವೆ. ಈ ಆಸ್ಪತ್ರೆಗಳ ಮಾಲೀಕರು ವೈದ್ಯರು. ಮಾಲೀಕರಿಗೆ ಶಿಕ್ಷೆ ಎಂದಾದರೂ, ವೈದ್ಯರಷ್ಟೇ ಶಿಕ್ಷಿಸಿದಂತಾಗುತ್ತದೆ. ಚಿಕಿತ್ಸೆ ವೈಫಲ್ಯ ಅಥವಾ ಚಿಕಿತ್ಸಾ ವೆಚ್ಚಗಳ ಏರುಪೇರಿನ ಕಾರಣಕ್ಕೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವುದು ಎಷ್ಟು ಸರಿ?

ಸಣ್ಣ ಮತ್ತು ಮಧ್ಯಮ ಗಾತ್ರದ ಖಾಸಗಿ ಆಸ್ಪತ್ರೆಗಳು ಸರ್ಕಾರದಿಂದ ಯಾವುದೇ ಸವಲತ್ತು ಪಡೆಯುತ್ತಿಲ್ಲ. ಚಿಕಿತ್ಸಾ ಶುಲ್ಕಗಳ ವಿವರ ಪ್ರಕಟಿಸಲು ವೈದ್ಯರು ಸಿದ್ಧ. ಆದರೆ, ಸರ್ಕಾರ ಈ ದರ ನಿಗದಿಪಡಿಸುವುದು, ಪರಿಷ್ಕರಿಸುವುದು ಎಷ್ಟರಮಟ್ಟಿಗೆ ಸರಿ? ವಕೀಲರಿಗೆ, ಚಾರ್ಟರ್ಡ್ ಅಕೌಂಟೆಂಟ್‌ರುಗಳಿಗೆ, ಸಿನಿಮಾ ನಟರಿಗೆ ಇಲ್ಲದ ಕಟ್ಟುಪಾಡುಗಳು ವೈದ್ಯರಿಗೇಕೆ?

ಹಣ ಪಾವತಿಸುವವರೆಗೂ ಆಸ್ಪತ್ರೆಗಳು ಶವ ನೀಡುವುದಿಲ್ಲ ಎನ್ನುವ ವಿಚಾರವನ್ನು ಭಾವನಾತ್ಮಕವಾಗಿ ಬಳಸಿ ವೈದ್ಯ ಸಮುದಾಯಕ್ಕೆ ಅವಮಾನ ಮಾಡಲಾಗಿದೆ. ವೈದ್ಯಕೀಯ ವೆಚ್ಚಗಳಿಗೆ ಸಂಬಂಧಪಟ್ಟಂತೆ ರೋಗಿಗಳ ಕಡೆಯವರು ಮನವಿ ಮಾಡಿಕೊಂಡಾಗ ಬಹಳಷ್ಟು ಸಲ ವೈದ್ಯರು ಅಂತಹ ಮನವಿಗಳನ್ನು ಪುರಸ್ಕರಿಸುತ್ತಾರೆ. ಹೀಗಾಗಿ ಈ ಅಂಶವನ್ನೂ ತಿದ್ದುಪಡಿಯಿಂದ ಹೊರಗಿಡಬೇಕು.

ಈ ಮೇಲಿನ ಅಂಶಗಳನ್ನು ಕೈಬಿಟ್ಟು ಉಳಿದ ತಿದ್ದುಪಡಿಗಳಿಗೆ ತಕರಾರು ಇಲ್ಲ.

ಖಾಸಗಿ ವೈದ್ಯರ ಬೇಡಿಕೆಗಳಿಗೆ ಯಾವೆಲ್ಲ ಸಂಸ್ಥೆಗಳು ಬೆಂಬಲ ನೀಡಿವೆ?

ವೈದ್ಯಕೀಯ ಶಿಕ್ಷಣ ಸಂಸ್ಥೆಗಳು, ದಂತ ವೈದ್ಯರ ಒಕ್ಕೂಟ, ಪ್ರಯೋಗಾಲಯಗಳ ಒಕ್ಕೂಟ, ಕರ್ನಾಟಕ ಖಾಸಗಿ ಆಸ್ಪತ್ರೆಗಳ ಒಕ್ಕೂಟ, ವಿವಿಧ ತಜ್ಞ ವೈದ್ಯರ ಸಂಘಟನೆಗಳು, ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್, ರಕ್ತನಿಧಿಗಳು.

ಖಾಸಗಿ ವೈದ್ಯರ ಮುಂದಿನ ನಡೆ ಏನು?

ಈಗಿನ ಸ್ವರೂಪದ ಮಸೂದೆಯನ್ನು ಕೈಬಿಡದಿದ್ದರೆ ವೃತ್ತಿಯನ್ನೇ ತೊರೆಯುವುದಾಗಿ ಹೇಳಿದ್ದಾರೆ.

ರಾಜ್ಯ ಸರ್ಕಾರದ ನಿಲುವು ಏನು?

ಮಸೂದೆಯಲ್ಲಿರುವ ಅಂಶಗಳ ಕುರಿತು ಖಾಸಗಿ ಆಸ್ಪತ್ರೆಗಳ ಮಾಲೀಕರ ಜೊತೆ ಸರ್ಕಾರ ಈಗಾಗಲೇ ಚರ್ಚೆ ನಡೆಸಿದೆ. ಅವರ ಬೇಡಿಕೆಗಳಿಗೂ ಸ್ಪಂದಿಸುವ ಭರವಸೆ ನೀಡಿದೆ. ಆದರೆ, ಈ ಅಂಶಗಳ ವಿಚಾರ ಸದನದಲ್ಲಿ ನಿರ್ಧಾರ ಆಗಬೇಕಿದೆ.